ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ428/2014

ಚಾಸಾಃ3 ಪ್ರಾಸಾಃ2

ದಿನಾಂಕಃ 20.03.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕೆ. ನವೀನ್ ಕುಮಾರ್ |
| ತಂದೆಯ ಹೆಸರು | : | ಲೇಟ್ ಕೆ. ನೀಲಕಂಠ ರಾವ್ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಸಣ್ಣ ಉದ್ದಿಮೆ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ನಾನು ದಶಮಿ ಇನಫ್ರಸ್ಟ್ರಕ್ಚರ್ ಇಂಡಿಯಾ ಪ್ರೈ.ಲಿಮಿಟೆಡ್ ರವರು ಹೊಸದಾಗಿ ನಿರ್ಮಿಸುತ್ತಿದ್ದ ಕಟ್ಟಡದಲ್ಲಿ ಸುಪ್ರವೈಸರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು 3 ನೇ ಮಹಡಿಯಲ್ಲಿ ಕೆಲಸ ಮಾಡುತ್ತಿದ್ದು, ಘಟನೆಯನ್ನು ನೋಡಿರುವುದಿಲ್ಲ ಕೆಳಗೆ ಬಂದಾಗ ಚಿನ್ನವನ್ನು ಎಳೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ. ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುವುದಿಲ್ಲ. ಒಂದು ಸಹಿ ಮಾಡಲು ಹೇಳಿರುತ್ತಾರೆ ನಾನು ಸಹಿ ಮಾಡಿರುತ್ತೇನೆ, ಓದಿ ನೋಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 26-10-2013 ರಂದು ಬೆಳಿಗ್ಗೆ ನಾನು ಸೈಟಿನಲ್ಲಿ ಕೆಲಸ ಮಾಡುತ್ತಿದ್ದು 8-45 ಗಂಟೆ ಸುಮಾರಿಗೆ ಸೈಟಿನ ಹೊರಭಾಗದಲ್ಲಿ ನಿಂತು ಕೆಲಸ ಮಾಡುತ್ತಿದ್ದ ಕಡೆಗೆ ರಾಮ ಮಂದಿರ ಕಡೆಯಿಂದ ಹೆಡ್ ಪೋಸ್ಟ್ ಆಫೀಸು ಕಡೆ ಒಂದು ಕಪ್ಪು ಮೋಟಾರು ಸೈಕಲಿನಲ್ಲಿ ಇಬ್ಬರು

ಸವಾರಿ ಮಾಡಿಕೊಂಡು ವೇಗವಾಗಿ ನಮ್ಮ ಸೈಟಿನಿಂದ ಹೋಗಿದ್ದು, ಮೋಟಾರು ಸೈಕಲು ಸವಾರ ಹೆಲ್ಮೇಟ್ ಧರಿಸಿದ್ದು, ಆ ಮೋಟಾರು ಸೈಕಲಿನ ನಂಬರ್ ಪ್ಲೇಟ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಮೋಟಾರು ಸೈಕಲ್ ಸವಾರರು ಹೋಗುತ್ತಿರುವುದನ್ನು ನೋಡುತ್ತಿದ್ದಾಗ ನಮ್ಮ ಸೈಟಿನಿಂದ 100 ಮೀಟರ್ ದೂರದಲ್ಲಿ ಒಬ್ಬ ಮಹಿಳೆ ಪೋಸ್ಟ್ ಆಫೀಸು ಕಡೆಯಿಂದ ರಾಮ ಮಂದಿರದ ಕಡೆಗೆ ರಸ್ತೆಯ ಪಶ್ಚಿಮ ಅಂಚಿನಲ್ಲಿ ನಡೆದುಕೊಂಡು ಬರುತ್ತಿದ್ದು, ಮೋಟಾರು ಸೈಕಲ್ ಸವಾರ ಅವರ ಬಳಿ ವಾಹನ ನಿಲ್ಲಿಸಿ ಹಿಂಬದಿ ಕುಳಿತ ವ್ಯಕ್ತಿ ಬೈಕಿನಿಂದ ಇಳಿದು ಮಹಿಳೆಯ ಕುತ್ತಿಗೆಯಲ್ಲಿದ್ದ ಸರವನ್ನು ಬಲತ್ಕಾರವಾಗಿ ಎಳೆದಿದ್ದು ಆಗ ಮಹಿಳೆ ಬೊಬ್ಬೆ ಹಾಕಿದ್ದು, ಜನರು ಸೇರುವಷ್ಟರಲ್ಲಿ ಆತ ಬೈಕಿನಲ್ಲಿ ಕುಳಿತು ಪೋಸ್ಟ್ ಆಫೀಸು ಕಡೆಗೆ ಬೈಕನ್ನು ಚಲಾಯಿಸಿಕೊಂಡು ಹೋಗಿರುತ್ತಾರೆ ಎಂದರೆ ನಾನು ನೋಡಿಲ್ಲ.

ನಾನು ನಮ್ಮ ಸೈಟಿನಲ್ಲಿ ಕೆಲಸ ಮಾಡುತ್ತಿದ್ದವರು ಬೊಬ್ಬೆ ಹಾಕುತ್ತಿದ್ದ ಮಹಿಳೆ ಬಳಿ ಹೋದಾಗ ಆ ಮಹಿಳೆ ತನ್ನ ಕುತ್ತಿಗೆಯಲ್ಲಿದ್ದ 3 ವರೆ ಪವನ್ ಚಿನ್ನದ ಕರಿಮಣಿ ಸರ ಎಳೆದುಕೊಂಡು ಹೋದ ಎಂದು ಹೇಳಿದ್ದು ನಾನು ಕೂಡಲೇ ಸೈಟಿನಲ್ಲಿದ್ದ ನನ್ನ ಮೋಟಾರು ಸೈಕಲಿನಲ್ಲಿ ಸರ ಎಳೆದುಕೊಂಡು ಹೋದ ಮೋಟಾರು ಸೈಕಲನ್ನು ಹಿಂಬಾಲಿಸಿಕೊಂಡು ಕುಂದಾಪುರದ ಸಂಗಮ್ ಜಂಕ್ಷನ್ ಬಳಿ ಹೋಗಿದ್ದು, ಆ ಮೋಟಾರು ಸೈಕಲು ಯಾವ ಕಡೆ ಹೋದರು ಎಂದು ತಿಳಿಯದ ಕಾರಣ ವಾಪಸ್ಸು ಬಂದಿದ್ದು, ಆ ಮಹಿಳೆ ಬಗ್ಗೆ ವಿಚಾರಿಸಲಾಗಿ ಲಲಿತಾ, ಕುಂದಾಪುರದ ರಾಮ ಮಂದಿರದ ಬಳಿ ಇರುವ ಶ್ರೇಷ್ಠ ಎಂಟರ್ ಪ್ರೈಸಸ್ ನಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಮನೆಯಾದ ಸಾಸ್ತಾನದ ಕಾರ್ಕಡದಿಂದ ಹೊರಟು ಹಳೆ ಬಸ್ಸು ನಿಲ್ದಾಣದಲ್ಲಿ ಬಸ್ಸಿನಿಂದ ಇಳಿದು ನಡೆದುಕೊಂಡು ಬರುತ್ತಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ.

ಮೋಟಾರು ಸೈಕಲಿನ ಹಿಂಬದಿಯಲ್ಲಿ ಇದ್ದ ವ್ಯಕ್ತಿ ಸುಮಾರು 25 ರಿಂದ 30 ವರ್ಷ ಪ್ರಾಯದವನಾಗಿದ್ದು, ಬಿಳಿ ಅಂಗಿ ಧರಿಸಿದ್ದು ಸಪೂರ ಶರೀರದವನಾಗಿದ್ದು, ಮೋಟಾರು ಸೈಕಲ್ ಸವಾರ ಕಪ್ಪು ಬಣ್ಣದ ಅಂಗಿ ಧರಿಸಿದ್ದು ಕಪ್ಪು ಬಣ್ಣದ ಹೆಲ್ಮೇಟ್ ಧರಿಸಿದ್ದು ನಾನು ಅವರಿಬ್ಬರನ್ನು ನೋಡಿರುತ್ತೇನೆಂದರೆ ಸರಿಯಲ್ಲ. ಈ ಮೇಲೆ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು.

ದಿಃ 28-11-2013 ರಂದು ಕುಂದಾಪುರ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ನಾನು ನೋಡಿದ್ದು, ಚಾಸಾ-1 ರವರ ಕುತ್ತಿಗೆಯಿಂದ ಸರವನ್ನು ಎಳೆದ ವ್ಯಕ್ತಿಯ ಹೆಸರು ಸಮೀರ್ ಅಹಮ್ಮದ್ ಮತ್ತು ಮೋಟಾರು ಸೈಕಲ್ ಸವಾರನ ಹೆಸರು ಅಹಮ್ಮದ್ ಮುಕ್ತಾರ್ ಎಂದು ತಿಳಿಯಿತು ಎಂದು ಮರುಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದ್ರಿ

ಮರುಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**